# ಕಾನನ

## ನಿಸರ್ಗದೆಡೆಗೆ ಪಯಣ

**OCTOBER 2012**



WILDLIFE
CONSERVATION
GROUP

© W C G

# ಕಾನನ

OCTOBER 2012

ನಿಸರ್ಗದೆಡೆಗೆ ಪಯಣ

ಲೇಖನಗಳು

* ನಾಗರ ಹುಲಿ – ಮುರಳಿ.ಎಸ್

* ಹಕ್ಕಿಲೋಕ – ಅಶ್ವಥ.ಕೆ.ಎನ್

* ವಿದ್ಯಾರ್ಥಿಗಾಗಿ ವಿಜ್ಞಾನ – ಮುರಳಿ.ಎಸ್

* ದೂರದ ಚುಕ್ಕಿ – ನಾಗರಾಜ್ ಆರ್ ಅಂಬಿಗ

ಅನಿಸಿಕೆ

E-mail: kaanana.mag@gmail.com

ಮುಖಪುಟ: ಶಿವನ ಸಮುದ್ರ ಜಲಪಾತ






ನಮ್ಮ ನಾಗರೀಕ ಪರಿಸರ ಬಹುಸಂಕೀರ್ಣ. ನಮ್ಮ ಮೆದುಳಿನ ನರಬಳ್ಳಿಗಳ ಜಾಲದಂತೆ. ಇಲ್ಲಿ ಮಾನವ-ಮಾನವರ ಜೊತೆಗೆ, ಇತರೇ ಖಗ ಮೃಗಗಳಿಗೂ ಮರಬಳ್ಳಿಗಳಿಗೂ ತನ್ನದೇ ಆದ ಒಂದೊಂದು ಪಾತ್ರವಿದೆ. ಇವೆಲ್ಲವೂ ಸಕ್ರಿಯವಾಗಿ ಪರಸ್ಪರ ಭಾಗವಹಿಸಿ ತಿಳಿದೋ ತಿಳಿಯದೆಯೋ ಜೀವಂತವಾಗಿ ತನ್ನನ್ನು ತಾನೇ ಮಾರ್ಪಡಿಸಿಕೊಂಡು ಮುಂದೆ ಮುಂದೆ ಸಾಗುತ್ತಿವೆ.

ಎಲ್ಲವೂ ಸೌಖ್ಯವಾಗಿ ನಡೆಯುತ್ತಿದೆ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ ಪರಿಸರದ ಈ ಮಹಾನಾಟಕದಲ್ಲಿ ನಾವು ಯಾವುದೇ ಕ್ಷಣದಲ್ಲಿ ಮರೆಯಾಗಬಹುದಾದ ಒಂದು ಜೀವಿ. ಆದರೂ ನಮ್ಮ ಇಚ್ಛಾಶಕ್ತಿ ಬಹಳ ದೊಡ್ಡದು ನಾವು ಮನಸಿಟ್ಟಿದ್ದನ್ನು ಸಾಧಿಸಿ ತೋರಿಸಿದ್ದೇವೆ. ಚಂದ್ರನ ಮೇಲೆ ನಡೆದಿದ್ದೇವೆ. ಹಕ್ಕಿಯಂತೆ ಹಾರಿದ್ದೇವೆ. ಪರಿಸರದ ಜೊತೆಗೆ ಬದುಕುವ ಕಲೆಯನ್ನು ನಾವೂ ಕಲಿತು ನಮ್ಮ ಮಕ್ಕಳಿಗೂ ತಿಳಿಸದ್ದಿದ್ದರೆ ಮುಂದಿನ ದಿನಗಳು ಬದುಕು ಕತ್ತಲಾಗುವುದರಲ್ಲಿ ಸಂಶಯವಿಲ್ಲ .

ಹುಲಿ ಗಣತಿಯಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದ ಎಸ್. ಮುರಳಿ ಯವರು ಅಲ್ಲಿ ತಮಗಾದ ಅನುಭವದ ಚಿತ್ರಣವೇ *ನಾಗರ ಹುಲಿ .* ಇದರ ಮುಂದುವರಿದ ಭಾಗವನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಸಕಲವೂ ಬದಲಾಗುತ್ತಿರುವ ಈ ಕಾಲದಲ್ಲಿ ನಾವು ಕಟ್ಟುತ್ತಿರುವ ಸೀಮೇಂಟಿನ ಮನೆಗಳಲ್ಲಿ ಗುಬ್ಬಚ್ಚಿಗಳಗೆ ಗೂಡುಕಟ್ಟಲು ಜಾಗವಿಲ್ಲದೆ ಅವು ಕಡಿಮೆಯಾಗುತ್ತಿವೆ. ಗುಬ್ಬಿಗಳಿಗೆ ಬದುಕುವ ನೆಲೆಯನ್ನು ನಿರ್ಮಿಸಿ ನಮ್ಮಂತೆಯೇ ಬದುಕಲು ಅನುವು ಮಾಡಿಕೊಡಬೇಕಾದದ್ದು ಮಾನವರಾದ ನಮ್ಮ ಕರ್ತವ್ಯ ಎಂದು ಬಹು ಸೊಗಸಾಗಿ ಗುಬ್ಬಿ ಗೂಡಿನನಲ್ಲಿ ಬಗ್ಗೆ ಅಶ್ವಥ ಕೆ.ಎನ್ ರವರು ವರ್ಣಿಸಿದ್ದಾರೆ. ಭೂಮಿಯ ಸಕಲ ಜೀವಿಗಳ ಶಕ್ತಿಯ ಕೇಂದ್ರ ವಾದ ಸೂರ್ಯನನ್ನು ಕುರಿತು *"ಮಾಡಿದವೋ ದೂರದಲಿ ಅಂಬರದ ಚುಕ್ಕಿ"* ಎಂದು ನಾಗರಾಜ್ ಅಂಬಿಗರು *ದೂರದ ಚುಕ್ಕಿ* ಕವನದಲ್ಲಿ ಚಿತ್ರಿಸಿದ್ದಾರೆ. ವಿ ವಿ ಅಂಕಣದಲ್ಲಿ ಮಾನವರ ಮಾತನ್ನು ಗಿಳಿಗಳು ಅನುಕರಿಸುವಂತೆ ತಿಮಿಂಗಲಗಳು ಸಹಾ ಅನುಕರಿಸಿ ಮಾತಾನಾಡುತ್ತವೆ ಎಂಬ ಕೌತುಕವನ್ನು ಹೇಳಲಾಗಿದೆ .

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

ಇ-ಮೇಲ್ ವಿಳಾಸ : **kaanana.mag@gmail.com**

**Wildlife Conservation Group**



# ನಾಗರ ಹುಲಿ

ಮುಂದುವರಿದ ಭಾಗ. . . .

ಚಿಕ್ಕಂದಿನಲ್ಲಿ ನಾಗರಹೊಳೆಗೆ ಟ್ರಿಪ್ ಬಂದಿದ್ದಾಗ ಗೆಸ್ಟ್ ಹೌಸ್ ನಲ್ಲಿ ಮಲಗಿದ್ದಾಗ ರಾತ್ರಿ ಒಂದೊತ್ತಿನಲ್ಲಿ ಎದ್ದು ನೋಡಿದಾಗ ನೂರಾರು ಜಿಂಕೆಗಳಿದ್ದುದ್ದನ್ನು ನೋಡಿ ಮನದಲ್ಲಿ ಅಚ್ಚಾಗಿತ್ತು. ಅಲ್ಲೇ ಉಳಿದುಕೊಳ್ಳುವ ಸಂಧರ್ಭ ಈಗ ಒದಗಿ, ವಾಚಾರ್ ನನ್ನು ಕೇಳಿದಾಗ ಈಗಲೂ ಹಾಗೆಯೇ. ಬೇಟೆಯಿಂದ ತಪ್ಪಿಸಿಕೊಳ್ಳಲು ಹಾಗೆ ಮಾಡುತ್ತವೆಯೆಂದೂ ಕಾರಣ ಕೊಟ್ಟ. ಇದೇ ಕ್ಯಾಂಪಿನ ನಾಲ್ಕನೇ ದಿನ ಬೆಳಿಗ್ಗೆ ಸೀಳುನಾಯಿಗಳು ಜಿಂಕೆಯೊಂದನ್ನು ಬೇಟೆಯಾಡಿದ ದೃಷ್ಯ ಕಣ್ಣಾರೆಕಂಡೆ. ಡಾರ್ಮೆಟ್ರಿಗಳು ರೆಡಿಯಾಗಿದ್ದವು. ನಮ್ಮ ರೇಂಜ್ ಗೆ ಸುರೇಶ್ ತಂಡ ಬೇರೆಯಾಗಿ ನಾನು ಮತ್ತು ಮನೋಹರ ಒಂದೇ ಕಡೆ ಇದ್ದೆವು. ಬೆಳಿಗ್ಗೆ ಎದ್ದು ಅತ್ಯಂತ ಕೌತುಕವಾಗಿದ್ದ ನಾವು, ರೇಂಜ್ ಆಫೀಸ್ಗೆ ಹೋದೆವು. ರೇಂಜರ್ ಎಲ್ಲರನ್ನೂ ಬರ ಮಾಡಿಕೊಂಡು ಪರಿಚಯ ಮಾಡಿಕೊಂಡು ಮುಂದಿನ ಆಕ್ಷನ್ ಪ್ಲಾನಿನ ಬಗ್ಗೆ ಹೇಳಿದರು. ಕೆಲವರು ಆಂಟಿ ಪೋಚಿಂಗ್ ಕ್ಯಾಂಪಿನಲ್ಲೇ ಉಳಿದುಕೊಳ್ಳುವುದು, ಕೆಲವರು ಬೇಸ್ ಕ್ಯಾಂಪಿಗೆ ಬಂದು ಹೋಗುವುದೆಂದು ನಿರ್ಧಾರವಾಯಿತು.

ಆಂಟಿ ಪೋಚಿಂಗ್ ಕ್ಯಾಂಪಿನಲ್ಲೇ ಅಕ್ಕಿ ಬೇಳೆಯೆಲ್ಲಾ ಸಪ್ಲೈ ಆಗುತ್ತದೆ. ಮನೋಹರ ವಾರ ಪೂರ್ತಿ APC ನಲ್ಲೇ ಇರುವುದೆಂದು ಡಿಸೈಡ್ ಆಯಿತು. ಮೊದಲನೇ ದಿನ ಹೆಚ್ಚೇನು ಇಲ್ಲವಾದ್ದರಿಂದ ಸ್ವಲ್ಪ ಟೀಮ್ ಮೆಂಬರ್ಸ್ ನಾಗರಹೊಳೆ ರೇಂಜ್ ಸಿಕ್ಕಿದಕ್ಕೆ  ಡಿಪಾರ್ಟ್ಮೆಂಟ್ ಸ್ಟಾಫ್ ಒಡಗೂಡಿ ಗುಂಡು ಪಾರ್ಟಿ ನಡೆಸಿದರು. ಯಾವತ್ತೂ ನೋಡದ ಬ್ರಾಂಡ್ ಗಳು, ಆಹಾ! ಏನು ಅನುಭವವೋ ಏನೋ, ಅದೇನು ಧಮ್ ಗೊತ್ತಿಲ್ಲ ಒಟ್ಟಿನಲ್ಲಿ ಈತರದ ಸೆನ್ಸಸ್ ಪದೇ ಪದೇ ಬರಲಿ ಎಂದು ವಾಚಾರ್ ಒಬ್ಬ ಪ್ರಾರ್ಥಿಸಿದ್ದುಂಟು.

ಹಿಂದೊಮ್ಮೆ ವಾಚಾರ್ ಒಬ್ಬ ಕುಡಿದ ಅಮಲಿನಲ್ಲಿ ಡಬಲ್ ಬ್ಯಾರೇಲ್ ರೈಫಾಲ್ ನಿಂದ ನಾಟಕ ಮಾಡ ಹೋಗಿ ಗಾರ್ಡ್ ಒಬ್ಬನನ್ನು ರಿಯಲ್ ಆಗಿ ಬಲಿ ತೆಗೆದು ಕೊಂಡಿದ್ದು ಅಂದಿನಿಂದ ಆ ರೇಂಜ್ ಲೋಕಲ್ ರೂಲ್ ಏನೆಂದರೆ ಮದ್ದು ಗುಂಡು ಗಾರ್ಡ್ ಜೇಬಿನಲ್ಲಿ ವಾಚರ್ ಹೆಗಲ ಮೇಲೆ ರೈಫಿಲ್. ಆನೆ ಬಂದರೆ ಇನ್ಸ್ಟಿಂಕ್ಟ್ ನಲ್ಲಿ ರೈಫಲ್ ಮೇಲೆ ಬಂದು ಗುರಿ ಇಟ್ಟಾಗ, ಆನೆ ಕಾಣಿಸುತ್ತದೆಯೇ  ಹೊರೆತು ಕ್ಲಿಕ್ ಮಾಡಿದಾಗ  ಡಮ್ ಸೌಂಡ್ ಬದಲು ಟಿಕ್ ಟಿಕ್ ಸೌಂಡ್ ಬರುವುದರಿಂದ ಇದರಲ್ಲಿ ಗುಂಡು ಇಲ್ಲವೆಂದು ತಲೆಗೆ ಹೊಳೆದು ಆಮೇಲೆ ಓಡ ತೊಡಗುತ್ತಾರೆ. ವಾಚಾರ್ ಗಳು ಬಹಳ ಬುದ್ಧಿವಂತರು. ಪ್ರಾಣಿಗಳ ಬಿಹೇವಿಯರ್ ಗೊತ್ತಿರುವವರು. ಗಾರ್ಡ್ ಗಳೋ ಫಾರೆಸ್ಟ್ ಡಿಗ್ರಿ ಮುಗಿಸಿ ಪರೀಕ್ಷೆ ಇದ್ದಾಗ




ಪ್ರಾಕ್ಟಿಕಲ್ಸ್ ಮಾಡಿ ಪೂಸಿ ಹೊಡೆದು ವೈವಾ ಇಂಟರ್ನಲ್ಸ್ ಮುಗಿಸಿ ಮೆರಿಟ್ನಲ್ಲಿ ಪಾಸಾಗಿ ಸಾಯುವವರೆಗೂ ಕಲಿತರೂ ವಾಚಾರ್ ಗಳಿಗಿರುವ ಸಾಮಾನ್ಯ ಜ್ಞಾನ ಕೂಡ ಅನೇಕರಿಗೆ ಬರುವುದಿಲ್ಲ. ಏಕೆಂದರೆ ಇವರೆಲ್ಲರ ದೃಷ್ಟಿಕೋನ ಸಂಬಳವಾಗಿರುತ್ತದೆ. ಆನೆ ಬಂದಾಗ ಯಾವ ಮರ ಹತ್ತಬೇಕು ಯಾವ ಶಬ್ಧ ಮಾಡಬೇಕು ಯಾವ ಕಾಡು ಜಾಡು ಹಿಡಿಯಬೇಕು ತಿಳಿದುಕೊಳ್ಳಲು ಸದಾ ವಾಚಾರ್ ಗಳನ್ನೇ ಅವಲಂಬಿಸಿರುತ್ತಾರೆ. ಗಾರ್ಡ್ ಗಳು ಕಾಡನ್ನು ಗಾರ್ಡ್ ಮಾಡುವುದನ್ನು ಬಿಟ್ಟು ವಾಚರ್ ನನ್ನೇ ವಾಚ್ ಮಾಡಿದರೂ ಕೊನೆಗಳಿಗೆಯಲ್ಲಿ ತಲೆ ಓಡದೆ ಕಕ್ಕಾಬಿಕ್ಕಿಯಾಗುವ ಪ್ರಸಂಗಗಳು ಅನೇಕ ಸಲ ನಡೆಯುತ್ತದೆ. ಅಂದು ಮುಂಜಾನೆ ಕೂಡ ಆರು ಗಂಟೆಗೆ ಎಲ್ಲಾ ರೇಂಜರ್ ಆಫೀಸ್ ಮುಂದೆ ಅಸೆಂಬ್ಲಿ ಆಗಿ ಸ್ಟ್ರಿಕ್ಟ್ ಇನ್ಸ್ಟ್ರಕ್ಷನ್ಸ್ ಕೊಡುವಾಗ ವಾಚಾರ್ ಒಬ್ಬ ಕುಡಿದ ಅಮಲಿನಲ್ಲಿ ಬಂದೂಕು ಚೆಕ್ ಮಾಡಲೆಂದು ಕೊಳವೆಯಲ್ಲಿ ಒಂದು ಕಣ್ಣ ನೋಟ ಹಾರಿಸಿ ಟ್ರಿಗರ್ ಒತ್ತಿಯೇ ಬಿಡುವಷ್ಟರಲ್ಲಿ ನಾವೆಲ್ಲ ಮಿಲಿಟರಿನಲ್ಲಿ ಸರಂಡರ್ ಆಗುವ ರೀತಿಯಲ್ಲಿ ತಲೆ ಹಿಂದೆ ಕೈ ಒರಗಿಸಿ ಕುಕ್ಕರಗಾಲಲ್ಲಿ ಕುಕ್ಕರಿಸಿದೆವು. ಅದರಲ್ಲಿ ಗುಂಡು ಇರಲಿಲ್ಲವೆಂದು ಗೊತ್ತಿದ್ದರೂ ಪ್ರಾಣ ಭಯ ನೋಡಿ. ಮೊದಲೇ ಟ್ರಾನ್ಸಾಕ್ಟ್ ಲೈನ್ ಕಡಿದು ಒಬ್ಬರು ಆರಾಮವಾಗಿ ಹೋಗುವ ಅಗಲದಷ್ಟು ರೆಡಿ ಮಾಡಲಾಗಿತ್ತು. ಫಯರ್ ಲೈನ್ ಬೇರೆ ಟ್ರಾನ್ಸಾಕ್ಟ್ ಲೈನ್ ಬೇರೆ. ಟ್ರಾನ್ಸಾಕ್ಟ್ ಲೈನ್ನಲ್ಲಿ ಬೇರೇ ಎಂದೂ ಕೇಳಿರದಂತ ನಿಶ್ಯಬ್ಧತೆ, ವನ್ಯಗಳ ಕಲರವ ಬಿಟ್ಟರೆ ನಮ್ಮ ಉಸಿರಾಟವೊಂದೇ ಶಬ್ಧ. ಒಂದೊಂದು ಹಕ್ಕಿಗಳ, ಪ್ರಾಣಿಗಳ ಝೇಂಕಾರ ಬೋಸ್ ಸ್ಪೀಕರ್ನಲ್ಲಿ ಕೇಳಿದ ಡಿಜಿಟಲ್ ಕ್ಲಾರಿಟಿ. ನಿಜ ಋಷಿ ಮುನಿಗಳು ಇಂತಹವುದನ್ನು ಬಿಟ್ಟು ಬರಲು ಮನಸ್ಸಾದರೂ ಬರುವುದೇ .




ಮುಂಜಾನೆ ಟ್ರಾನ್ಸಾಕ್ಟ್ ಲೈನ್ ನನ್ನು ಅನೇಕ ಪ್ರಾಣಿಗಳು ಕ್ರಾಸ್ ಮಾಡುತ್ತವೆ. ಈ ಸಲ ಸ್ಕ್ಯಾಟ್ ಕೌಂಟ್ ಮಾಡಿ ಸೆನ್ಸಸ್ ಮಾಡುವ ಟೆಕನಿಕ್. ನಮ್ಮ ದೇಶದಲ್ಲಿ ಅನ್ ಸೈಂಟಿಫಿಕ್ ಕೆಲಸ ಮಾಡುವುದರಲ್ಲಿ ಎತ್ತಿದ ಕೈ . DNA ಫಿಂಗರ್ ಪ್ರಿಂಟ್ ನಂತಹ ಅತ್ಯಾಧುನಿಕ ಟೆಕ್ನೀಕ್ ಗಳನ್ನು ಬಿಟ್ಟು ಲದ್ದಿಗೆ ಕೈ ಹಾಕುವ ಕೆಲಸವೇ ಇಷ್ಟ. ಮೊದಲನೇ ದಿನವೇ ಶಾಕ್. ನಡೆದು ಹೋಗುವ ದಾರಿಯ ನಾಲ್ಕು ಹೆಜ್ಜೆ ಪಕ್ಕದಲ್ಲಿಯೇ ಸಾಂಬಾರ್ವೊಂದು ನಿಂತಿತ್ತು. ನಮ್ಮ ಕುರುಹು ಮೊದಲೇ ಅಲಿಸಿ, ಅದು ಕಿರುಚಿದ ಶಬ್ಧ ಕ್ಯಾಂಪ್ ಮುಗಿಸಿ ಬರುವಾಗಲೂ ಗುಂಯ್

ಗುಡುತ್ತಿತ್ತು. ಒಂಭತ್ತನೇ ಕ್ಲಾಸಿನಲ್ಲಿ ಹೊಸದಾಗಿ ರಿಲೀಸ್ ಆಗಿದ್ದ ಜೂರಾಸಿಕ್ ಪಾರ್ಕ್ ಸಿನಿಮಾ ತೋರಿಸಲು ಶಾಲೆಯಿಂದ ಕರೆದುಕೊಂಡು ಹೋಗಿದ್ದರು. ಡೈನೋಸಾರ್ ಕಿರುಚಿದಾಗ ಅದರ ಕಂಪನ ತಾಳಲಾರದೇ ಸ್ಪೀಕರ್ ನ ಪೇಪರ್ ಹರಿದು ಹೋಗಿ ರಾಕ್ಷಸೀಯ ಕರ್ಕಶ ಧ್ವನಿ ಬಂದು ಡೈನೋಸಾರ್ ಗಳ ಭಯಾನಕತೆಯನ್ನು ದುಪ್ಪಟ್ಟು ದೂಡಿ ನಮ್ಮ ಕಿವಿಯ ಪೇಪರ್ ಕೂಡ ಹರಿದು ಹೋಗುವುದರಲ್ಲಿತ್ತು. ಕಾಡಿನ ಒಳಗಿನ ನಿಶ್ಯಬ್ಧತೆಯನ್ನು ಅನುಭವಿಸುವುದು ಒಂದು ದೈವಾನುಭವ. ಇದೇ ರೀತಿ ಅನೇಕ ಪ್ರಾಣಿಗಳು ಸಿಕ್ಕವು. ಆದರೆ ಹುಲಿ ಮಾತ್ರ ಸಿಕ್ಕಲಿಲ್ಲ. ಒಂಟಿ ಸಲಗವೊಂದು ಅಡ್ಡ ಸಿಕ್ಕಿ ಕಾಲು ಕೆರೆಯ ಬೇಕಾದರೆ ಬೇಗ ಬೇಗ ಹೆಜ್ಜೆ ಹಾಕಿದೆವು.

ಮುಗಿಸಿ ಬರುವಾಗ ಮಧ್ಯಾಹ್ನ, ಮೆಸ್ ನಲ್ಲಿ ಮಸಾಲೆ ಗಮ!! ಸುಮ್ಮನೆ ಇರಲಾರದೇ ವಿಚಾರಿಸಿದೆ. ಯಾರೋ ದೊಡ್ಡ ಸಾಹೇಬರು ಬರುತ್ತಾರೆಂದು ಕೋಳಿ ಊಟ. ಹಾಗೇ ವಿಚಾರಿಸಿದಾಗ ತಿಳಿಯಿತು ಸಾಹೇಬರಿಗೆ ಕಾಡು ಹುಂಜದ ಅಡುಗೆ ಬಹಳ ಪ್ರಿಯ. ಹೀಗೆ ಕಾಣದಂತ ಮಾಯವಾಗುವ ವನ್ಯ ಮೃಗಗಳು ಅದೆಷ್ಟೋ. ನಾಗರಹೊಳೆಯ ಕಾಡುಗಳು ವನ್ಯ ಮೃಗಗಳ ಸಂಖ್ಯೆಗಳನ್ನು ಬಹಳ ಸೂಕ್ಷ್ಮ ಸಮತೋಲನದಲ್ಲಿ ಕಾಪಾಡಿ ಕೊಂಡು ಬಂದಿದೆ. ಸೆಮಿ ಎವರ್ ಗ್ರೀನ್, ಮಾಯ್ಸ್ಟ್ ಡೆಸಿಡಿಯಸ್ ಮತ್ತು ಡ್ರೈ ಡೆಸಿಡಿಯಸ್ ವರ್ಗದ ಕಾಡುಗಳು. ಮೋಸ್ಟ್ಲಿ 30% ಕಾಡು ಟೀಕ್ ಪ್ಲಾಂಟೇಷನ್ ಇರಬಹುದು . ದೊಡ್ಡ ದಿಮ್ಮಿಗಳನ್ನು ಬ್ರಿಟೀಷರ ಕಾಲದಿಂದ ಕಡೆದು ಗ್ರೀನ್ ಕವರ್ ಮಾಡಲು ಟೀಕ್ ನೀಲಗಿರಿ ಮತ್ತು ಅಕೇಶಿಯ ಇನ್ನಿತರ ಸಸ್ಯಗಳ ಮೋನೋಕಲ್ಚರ್ ಮಾಡಿ, ಅರಣ್ಯ ವಿಭಾಗದವರನ್ನು ಕೇಳಿದಾಗ “ಆ ವಿಷಯ ಬಿಡಿ ಎನ್ನುವ ಉತ್ತರ”. ಸಫಾರಿ ತೋರುವಾಗ ಪ್ರಾಣಿಗಳು ಚೆನ್ನಾಗಿ ಕಾಣುತ್ತವೆ.



ಅಲ್ಮೋಸ್ಟ್ ಇಂತಹ ಜಾಗದಲ್ಲಿ ಲಾಂಟಾನಾ ತನ್ನ ಸಾಮ್ರಾಜ್ಯ ಸ್ಥಾಪಿಸಿರುತ್ತದೆ. ತನ್ನ ಸಾಮ್ರಾಜ್ಯ ಇನ್ನೂ ಎಕ್ಸ್ಟೆಂಡ್ ಮಾಡುವ ನಿಟ್ಟಿನಲ್ಲಿ ವರ್ಜಿನ್ ಕಾಡುಗಳಿಗೂ ದಾಳಿ ಮಾಡಿ ಆಳ್ವಿಕೆ ನಡೆಸುತ್ತದೆ. ವನ್ಯ ಪ್ರಾಣಿಗಳು ಇವುಗಳಿಂದ ಹಿಂಸೆಯಾಗುತ್ತದೋ ಏನೋ ಗೊತ್ತಿಲ್ಲ, ಕೆಲವು ಪಕ್ಷಿಗಳು ಹಣ್ಣು ತಿನ್ನುವುದನ್ನು ಬಿಟ್ಟರೆ ನಮಗಂತೂ ಅವುಗಳನ್ನು ನೋಡಿ ನೋಡಿ ಬೇಸರ ಬರುತ್ತದೆ. ಪಶ್ಚಿಮ ಘಟ್ಟಗಳ ಅನೇಕ ಕಡೆ ಅಕೇಷಿಯಾದ ಹಸಿರು ನೋಡಿ ಹೇಳಲಾಗದ ಸಂಕಟವಾಗುತ್ತದೆ. ಪಶ್ಚಿಮ ಘಟ್ಟಗಳನ್ನು ಯುನೆಸ್ಕೋ ದ ಹೆರಿಟೇಜ್ ಲಿಸ್ಟ್ ಗೆ ಸೇರಿಸಿದಾಗ ಎಲ್ಲೆಲ್ಲಿ ಏನೇನೋ ಯಾವುದು ಬಣ್ಣ ಬಯಲಾಗುತ್ತದೆ ಎಂದು ಕರ್ನಾಟಕ ಸರ್ಕಾರ ಅಡ್ಡಿ ಪಡಿಸಿ ಹಾಸ್ಯಾಸ್ಪದವಾದ ಘಟನೆ ಇನ್ನೂ ಹಸಿರಾಗಿಯೇ ಇದೆ. ಆದರೆ ಈ ತಿಂಗಳಷ್ಟೇ ಮತ್ತೆ ಅನೇಕ ದೇಶಗಳ ಒತ್ತಡದಿಂದ ಸೆಂಟ್ರಲ್ ಕಮಿಟಿಯ ಶಿಫಾರಸ್ಸಿನಿಂದ ಲಿಸ್ಟ್ ನಲ್ಲಿ ಸೇರ್ಪಡೆಯಾಗಿದೆ. ಕೋರ್ ಜಂಗಲ್ ನ ಒಳಗಡೆ ನೂರೈವತ್ತು ಅಡಿ ಎತ್ತರದ ಹೊನ್ನೆ, ಬೀಟೆ, ಕರಡಿ ಬಳಂಜಿ ಮುಂತಾದ ಕಾಡು ಜಾತಿಯ ಮರಗಳು ಹೇರಳವಾಗಿದೆ. ನಡೆಯುತ್ತಾ ಹೋದರೆ ಬಹಳ ದೊಡ್ಡದಾಗಿ ಕಾಣಿಸುವ ಕಾಡು, ಇರುವುದು ಕೇವಲ 600 ಚದುರ ಕಿಮಿ. ಅಷ್ಟೇ. ಇತ್ತೀಚೆಗಷ್ಟೇ ನಡೆದ ಬೆಂಕಿಯ ನರ್ತನದಲ್ಲಿ 32% ಕಾಡು ನಷ್ಟವಾಗಿದೆ ಎಂದು ಹೇಳಲಾಗುತ್ತದೆ. ಹುಲಿಗಳು ತಮ್ಮ ಟೆರಿಟೋರಿ ಕಳೆದುಕೊಂಡು ಇನ್ನೊಂದು ಟೆರಿಟೋರಿಗೆ ಹೋಗಿ ಸಾಯುವ ಒತ್ತಡ ಹೆಚ್ಚಾಗಿದೆ. ಬೆಂಕಿ ನಂದಿಸುವ

ಎಕ್ವಿಪ್ಮೆಂಟ್ ಆಗಲಿ ಮ್ಯಾನ್ ಪವರ್ ಆಗಲಿ ನಮ್ಮ ದೀಪಾರ್ಟ್ಮೆಂಟ್ ನಲ್ಲಿ ಇಲ್ಲ. ಇಂತಹ ಸಮಯದಲ್ಲಾದರೂ ವಾಲೆಂಟಿಯರ್ಸ್ ಕರೆದು ಬ್ಯಾಚ್ ಮಾಡಿದರೆ ಹಳೇ ಶಿಲಾಯುಗದ ಐಡಿಯಾ ಆದ ಗಿಡ ಕಿತ್ತು ಆರಿಸುವ ಕಲೆಯೇ ಸಾಕು.

ಕುರಿಗಳ ತರಹ ಇರುವ ಸ್ಪಾಟೆಡ್ ಡೀರ್ಸ್, ಇಡೀ ಕಾಡಿನಲ್ಲಿ ಯಾವಾಗ ಎಲ್ಲಿ ಬೇಕಾದರೂ ಕಾಣಿಸುವಷ್ಟು ಹೇರಳವಾಗಿದೆ. ಕಬ್ಬಿಣದಂತಹ ಮಾಂಸಖಂಡಗಳಿರುವ ಕಾಟಿಗಳು ಸಹ ಹೇರಳವಾಗಿವೆ. ಕೋಣಗಳ ಗಾತ್ರದಿಂದ ಒಳ್ಳೆಯ ಆಹಾರ ಸಿಗುತ್ತಿರುವುದರಲ್ಲಿ ಅನುಮಾನವಿಲ್ಲ. ಸುಮಾರು ಒಂದು ಟನ್ ತೂಗುವ ಇವು ಆನೆಗಳಿಗಿಂತ ಅಪಾಯಕಾರಿ. ಆದರೆ ಗಂಡು ಪ್ರಾಣಿ ಗುಂಪಿನ ಲೀಡರ್. ಈ ಕ್ಯಾಂಪಿನಿಂದ ಅನೇಕ ವನ್ಯ ಮೃಗಗಳ ಮುಖ ಚರ್ಯೆಯಲ್ಲಿ ಆಶ್ಚರ್ಯ ವ್ಯಕ್ತವಾದಂತ್ತಿತ್ತು. ಸಾಮಾನ್ಯವಾಗಿ ಇಷ್ಟೊಂದು ನಡೆದಾಟ ಕಾಡಿನ ಒಳಗೆ ಇರುವುದಿಲ್ಲವೇನೋ. ಜನವರಿ ತಿಂಗಳಾದ್ದರಿಂದ ಕಾಡಲ್ಲೆಲ್ಲ ತರಗೆಲೆಯ ಸರಸರ ಶಬ್ಧ. ಅನೇಕ ಸಲ ನಮ್ಮ ನಡೆದಾಟದ ಶಬ್ಧದಿಂದ ಪ್ರಾಣಿಗಳು ಓಡಿಹೋದದ್ದನು ನೋಡಿ ಬೇಸರವಾದದ್ದುಂಟು. ಇನ್ನೊಂದು ದಿನ ಹುಲಿ ಹೆಜ್ಜೆ ನೋಡಿ ಎಷ್ಟು ಹುಲಿಯೆಂದು ಲೆಕ್ಕ ಹಾಕುವ ಕಾರ್ಯ.




ನಮ್ಮ ಜೊತೆಯಲ್ಲಿದ್ದ ವಾಚಾರ್ ಬಲು ನಿಪುಣ. ಹಳೆ ತಲೆ, ಮರಳಿನ ಮೇಲೆ ಹೆಜ್ಜೆ ನೋಡಿ ಹೆಣ್ಣೋ ಗಂಡೋ, ದೊಡ್ಡದೋ ಚಿಕ್ಕದೋ ಎಂದು ಹೇಳಬಲ್ಲ. ನೀರಿನ ಜಾಗದಲ್ಲಿ ಹೆಜ್ಜೆ ಅಗಲವಾಗಿರುತ್ತದೆ. ಹೆಜ್ಜೆಯಲ್ಲಿ ನೀರು ಊರುತ್ತಿದ್ದರೆ ನಮ್ಮ ಶಬ್ಧ ಕೇಳಿ ಆಗ ತಾನೇ ಹುಲಿ ಕಾಲು ಕಿತ್ತಿದೆ ಎಂದು ಅರ್ಥ. ಹುಲಿಗಳು ನಾವಂದು ಕೊಂಡ ಹಾಗೆ ಭಯಾನಕ ಪ್ರಾಣಿಗಳಲ್ಲ. ಬೆಕ್ಕಿನ ಜಾತಿಯಾದ್ದರಿಂದ ಅವು ನಾಚಿಕೆ ಸ್ವಭಾವದವು ಮತ್ತು ಓಡಿ ಹೋಗುವವು. ಅಷ್ಟೇ ಕ್ಲೀನ್ ಕೂಡ. ಆದರೆ ನರಭಕ್ಷಕವಾದರೆ ಮಾತ್ರ ಊಹಿಸಲಾಗದಷ್ಟು ಭಯಾನಕ. ಕೇವಲ 300 ಕೆ.ಜಿ ತೂಗಿದರೂ ಬಲಿಷ್ಠ ಮಾಂಸಖಂಡಗಳು ಮತ್ತು ಅಗಾಧ ಶಕ್ತಿ. ಕೆನೆತ್ ಆಂಡರ್ಸನ್ ಕಥೆಗಳಲ್ಲಿ ಓದಿದ್ದ ಹಾಗೆ ನರಭಕ್ಷಕ ಹುಲಿಗಳ ತನ್ನ ಅಂಗೈ ಇಂದ ಹೊಡೆದ ಪರಿಣಾಮ ತಲೆಬುರುಡೆ ಪುಡಿ ಪುಡಿ ಯಾಗುತ್ತದೆ. ದನಗಳನ್ನು ಬೇಟೆಯಾಡಿದಾಗ ಇಡೀ ದನದ ದೇಹವನ್ನು ಬೆನ್ನು ಮೇಲೆ ಹಾಕಿಕೊಂಡು ಹೋಗುವ, ಇಡೀ ಮನುಷ್ಯನ ದೇಹ ಎಳೆದೊಯ್ಯುವ ಸನ್ನಿವೇಶಗಳು ಕೂದಲನ್ನು ನಿಮಿರೇಳುಸುತ್ತಿರುವ ಇವುಗಳ ಅಣ್ಣನಾದ ಸಿಂಹ ಆನೆಯ ಮರಿಗಳನ್ನು ತಿನ್ನುತ್ತವೆ. ನಾವು ಕ್ಯಾಂಪ್ ಗೆ ಹೋದ ಎರಡು ದಿನಗಳ ಹಿಂದೆಯಷ್ಟೆ ಕಾಡು ಕುರುಬನೊಬ್ಬನನ್ನು ಎಳೆದೊಯ್ದು ಮ್ಯಾನ್ ಈಟರ್ ಆದ ಘಟನೆ ಸಂಭವಿಸಿದ್ದು ಯಾರೊಬ್ಬರೂ ಆಕಡೆ ಹೋಗಲು ನಡುಗುತ್ತಿದ್ದರು. ಮೂರು ದಿನಗಳೂ ಬರೀ ಹುಲಿ ಹೆಜ್ಜೆ ನೋಡಿ ಎಣಿಕೆ ಹಾಕಿದ್ದಾಯ್ತು. ಅವರು ಹೇಳಿದ ಹಾಗೆ ಬರೆಯುತ್ತಿದ್ದೆವು. ಒಮ್ಮೆ ಅನುಮಾನ ಗೊಂಡು

“ನಾವ್ ನೋಡ್ತಾ ಇರೋದು ಒಂದೇ ಹುಲಿ ಹೆಜ್ಜೆ ತಾನೇ” ಎಂದು ಕೇಳಿದಾಗ “ಸುಮ್ಕಿರಿ ಸ್ವಾಮಿ ಸಾಯೇಬರು ಬಯ್ತಾರೆ ಅದೂ ಒಂದೇ ಹುಲೀನೆ ಆದ್ರೂ ಮೂರು ಬರೆದಿಲ್ಲ ಅಂದ್ರೆ ಕೆಲ್ಸ ಓಯ್ತುದೆ. ನೀವು ಹೇಳಿದ್ದನ್ನು ಸುಮ್ಕೆ ಬರ್ಕಳಿ” ಎಂದ. ಒಳಗೊಳಗೇ “ಹಿ ಹಿ ಹಿ” ಎಂದು ನಕ್ಕಿದೆ. ಆ ಕ್ಯಾಂಪಿನ ಸೆನ್ಸಸ್ ಪ್ರಕಾರ ಅತೀ ಹೆಚ್ಚು ಹುಲಿಯೆಂದರೆ ನಾಗರಹೊಳೆಯಲ್ಲಿ 65. ಇಡೀ ದೇಶದಲ್ಲಿ 1400. ನಿಜವಾದ ಮೊತ್ತ ಖಂಡಿತವಾಗಿಯೂ ಅದಲ್ಲ. 5% ಕಡಿಮೆ ಇರಬಹುದು.

ಅಂದು ರೇಂಜರ್ ನಮ್ಮೊಡನೆ ಬಂದಿದ್ದರು. ವೈಲ್ಡ್ ಲೈಫ್ ಬಗ್ಗೆ ಇಂಟರೆಸ್ಟ್ ಇದ್ದು ಅವರು ಸೇರಿ ಕೊಂಡಿದ್ದು ಅವರ ಕೆಲಸ ಮತ್ತು ಬುದ್ಧಿವಂತಿಕೆಯಿಂದ ತಿಳಿಯುತಿತ್ತು. ಅನೇಕ ಬಾರಿ ಅವರ ಜೀಪಿನ ಪಕ್ಕದಲ್ಲೇ ಕತ್ತಲಲ್ಲಿ ಎದುರಾಗಿ ಕಂಡ ದೃಶ್ಯದ ಅನುಭಗಳನ್ನು ಹಂಚಿಕೊಂಡರು. ಮರವೊಂದನ್ನು ತೋರಿಸಿ, ಇದನ್ನು ಮೂಸಿ ನೋಡಿ ಎಂದು ಹೇಳಿದರು. ಅದು ಟೆರಿಟೋರಿ ಮಾರ್ಕಿಂಗ್ ಮಾಡಿ ಮಾಡಿ ಸುಂಕು ವಾಸನೆ ನೆತ್ತಿಗೇರಿತು. ಇನ್ನೊಂದು ಮರದ ಮೇಲೆ ಕೆರೆದ ಗುರುತುಗಳು ಇದ್ದವು. “ಇದೇನೆಂದು ಗೆಸ್ ಮಾಡಿ ಎಂದರು? ಒಬ್ಬರು ಮರ ಏರಲು ಮಾಡಿದ ಪ್ರಯತ್ನ ಎಂದರೆ, ಇನ್ನೊಬ್ಬರು ಜಗಳವಾಡಿದ ಗುರುತುಗಳು ಎಂದೆಲ್ಲ ಊಹಿಸಿದರು. ಆದರೆ ಅದು ತನ್ನ ಉಗುರುಗಳನ್ನು ನುಣುಪುವಾಗಿ ಮಾಡುವ ವಿಧಾನವಂತೆ. ಆಗ ನಮ್ಮ ಕ್ಯಾಮೆರಾ ಇರಲಿಲ್ಲ ವಾದ್ದರಿಂದ ಏನನ್ನೂ ಚಿತ್ರಿಸಿಕೊಳ್ಳಲಾಗಲಿಲ್ಲ. ಕ್ಯಾಮರೆದಾ ಒಂದೇ ಒಂದು ದುರುಪಯೋಗವೆಂದರೆ ನೈಜ ವಾಸ್ತವವನ್ನು ಕಣ್ಣಲ್ಲಿ ಅನುಭವಿಸಲು ಬಿಡುವುದಿಲ್ಲ.

ನಾಲ್ಕನೇ ದಿನವಾಗಿದ್ದರೂ ಇನ್ನೂ ನಿಜವಾಗಿ ಹುಲಿ ನೋಡೇ ಇರಲಿಲ್ಲ. ಅಂದು ವಿಚಿತ್ರ ಸಂಗತಿಯೊಂದು ಸಂಭವಿಸಿತು. “ಕಾಗೆ ಇದೆ ಇಲ್ಲಿ ಸೈಲೆಂಟ್ ಆಗಿ ಬನ್ನಿ ಎಂದ”. ಕುತೂಹಲ ತಡೆಯಲಾಗದೆ ಎಲ್ಲರೂ ಸೈಲೆಂಟ ಆಗಿದ್ದರೂ ವಾಚರ್ ನ ಕಿವಿಯಲ್ಲಿ ಪಿಸುಗುಟ್ಟಿದೆ. “ಅಲ್ಲ ಕಾಗೆಗೂ ಹುಲಿಗೂ ಏನು ಸಂಬಂಧವಯ್ಯ” ಎಂದೆ. ಹುಲಿ ಬೇಟೆಯಾಡಿ ತಿಂದು ಬಿಟ್ಟು ಹೋಗಿರಬಹುದು. ನೋಡೋಣ ಎಂದು ಅದೇ ದಾರಿಯಲ್ಲಿ ಒಳಗೆ ಹೋದೆವು. ದೊಡ್ಡ ಹಂದಿಯನ್ನು ಪೊದೆ ಗೊದೆಗಳಲ್ಲಿ ಅಟ್ಟಾಡಿಸಿ ಬೇಟೆಯಾಡಿ ಸಾಯಿಸಿತ್ತು. ರಕ್ತ, ಮಾಂಸದ ತುಂಡುಗಳಿಂದ ತೊಟ್ಟಿಕ್ಕುತ್ತಿತ್ತು. “ಎಲ್ರೀ ಹುಲಿಯೆಂದು” ಕಿವಿಯಲ್ಲಿ ತೂರಿದೆ. “ತಿಂದು ಮುಗಿಸಿದೆ ಅಥವಾ ನಾವ್ ಬರೋದು ಕೇಳಿಸಿಕೊಂಡು ಕಾಲ್ ಕಿತ್ತೈತೆ ಸ್ವಾಮಿ” ಎಂದ. “ಬನ್ನಿ ಕೆರೆ ಕಡೆ ನೋಡೋಣ. ನೀರು ಕುಡಿಯಾಕ್ ಹೋಗೈತೆ. ಹೋಗುವ ದಾರಿಯಲ್ಲಿ ಮರಿ ಕೂಡ ಜೊತೆಗೆ ಐತೆ. ನಿಮ್ಮ ಅದೃಷ್ಟ ಚೆನ್ನಾಗೈತೆ” ಅಂದು ಹೆಜ್ಜೆ ಗುರುತು ತೋರಿಸಿದ..

.





# ಹಕ್ಕಿ ಲೋಕ

## * ಗುಬ್ಬಿ ಗೂಡು

**ವೈಜ್ಞಾನಿಕ ಹೆಸರು**: *Passer domesticus*

**ಇಂಗ್ಲೀಷ್ ಹೆಸರು**: **House Sparrow**




ನಾನು ಪ್ರೈಮರಿ ಸ್ಕೂಲಿನಲ್ಲಿದಾಗ ಗಮನಿಸಿದ್ದು, ಅಮ್ಮನ ಜೊತೆ ರಾಗಿಹಿಟ್ಟು ಮಾಡಿಸಲು, ರಾಗಿಗಿರಣಿಗೆ ಹೋಗಿದ್ದಾಗ, ಕೆಲವೊಮ್ಮೆ ಕರೆಂಟು ಇಲ್ಲದೆ, ಸುಮ್ಮನೆ ಕೂರಬೇಕಾಗಿ ಬರುತ್ತಿತ್ತು. ಅಮ್ಮನೇನೋ ಅಲ್ಲಿಗೆ ಬಂದಿದ್ದ ಅಕ್ಕ-ಪಕ್ಕದ ಹಳ್ಳಿಯ ಹೆಂಗಸರ ಬಳಿ ಅವರ ಸಂಸಾರದ ತಾಪತ್ರೆಯಗಳನ್ನು ಅಥವಾ ಬೇರೆಯಾರದೋ ವಿಚಾರಗಳನ್ನು ಮಾತಾಡುತ್ತಾ ಕುಳಿತಿರುತ್ತಿದ್ದರು. ಆದರೆ ಇವರ ಸಂಸಾರ ತಾಪತ್ರಯಗಳು ನನಗೇನು ತಿಳಿಯಬೇಕು. ಕೇಳಿಕೊಂಡು ಇವರ ಬಳಿ ಕುಳಿತಿರಲು ಐದತ್ತು ನಿಮಿಷ ಮಾತ್ರ ಸಾಧ್ಯ, ಅಮೇಲೆ ಬೇಜಾರಾಗಿ, ರಾಗಿ ಮಿಲ್ಲಿನ ಹೊರಗಡೆ ಇರುವ ಹುಣಸೆ ಮರಗಳ ಬಳಿಗೆ ಹೋಗಿ ಆಟವಾಡುತ್ತಾ ಕುಳಿತಿರುತ್ತಿದ್ದೆ. ಹುಣಸೆ ಮರಗಳ ಮೇಲೆ ಕೋತಿಗಳ ದಂಡು ಯಾವುದೋ ಮಾತಿನ ಚಕಮಕಿಯಿಂದ ಜಗಳ ಶುರುವಾಗಿ ಜೋರಾಗಿ ಗಲಾಟೆಮಾಡುತ್ತಾ ಮರದಿಂದ ಮರಕ್ಕೆ ನೆಗೆಯುತ್ತಿದವು, ಗಡವವೊಂದು ಜಗಳವಾಡುತ್ತಾ ಮೇಲಿಂದ ಬಿದ್ದು ಕಿರುಚುತ್ತ ಓಡಿಹೋಗುತ್ತಿತ್ತು.




ಮತ್ತೆ ಕೆಲವು ಬಾರಿ ನಾಯಿಗಳ ಗುಂಪು ಕೋತಿಗಳನ್ನು ಹಿಡಿಯಲು ಹೊಂಚು ಹಾಕುತ್ತ. . .ಬೊಗಳುತ್ತಿದ್ದವು. ಮಿಲ್ಲಿನ ಯಜಮಾನನ ಹಲಸಿನ ಮರಕ್ಕೆ ಲಗ್ಗೆ ಹಾಕಿದ್ದ ಕೋತಿಗಳನ್ನು ಓಡಿಸಲು ಬಾಯಿಬಡಿದುಕೊಳ್ಳುತ್ತಾ " ಏ. . .ಏ. . .ಏ. . .ಇಳಿರೀ ಕೆಳಗೆ, ಎಲ್ಲಾ ಪಿಂದೆ-ಕಾಯಿಗಳನ್ನು ಕಚ್ಚಿ ಹಾಳ್ಮಾಡಿದ್ವು, ಇವುಗಳ ಮನೆಕಾಯೋಗ" ಎಂದು ಬಯ್ಯುತ್ತಾ, ನಾಯಿಗಳನ್ನು ಛೂ. . .ಬಿಡುತ್ತಾ ಓಡಿ ಹೋಗುತ್ತಿದ್ದ. ಮಿಲ್ಲಿನ ಮುಂದೆ ನೆಲದ ಅಂಗಳದಲ್ಲಿ ಬಿದ್ದಿರುವ ರಾಗಿ, ಭತ್ತ, ನುಚ್ಚು, ಅಕ್ಕಿ, ಗೋಧಿ, ಮತ್ತು ಕಾಳು-ಕಡಿಗಳನ್ನು ಮೇಯುತ್ತಾ ಕುಳಿತ್ತಿದ್ದ ನೂರಾರು ಗುಬ್ಬಚ್ಚಿಗಳು ಇವನ ಓ ಡಿದ ರಭಸಕ್ಕೆ "ಚೀಂವ್. . . ಚೀಂವ್. . . ಚೀಂವ್. . ."ಎಂದು ಚೀರುತ್ತಾ ಹಾರಿ ಹೋದವು. ಮಿಲ್ಲಿನ ಪಕ್ಕದಲ್ಲೇ ಇದ್ದ ಹಳೆಯದಾದ ಹೆಂಚಿನ ಮನೆಯ ಸೂರಿನ ಮೇಲೆ ಹೋಗಿ ಕೂರುತ್ತಿದ್ದವು. ಗುಬ್ಬಿಗಳು ಸಾಮಾನ್ಯವಾಗಿ ಎಲ್ಲಾರಿಗೂ ಪರಿಚಿತವಾದ ಹಕ್ಕಿ. ಬೂದು ಮಿಶ್ರಿತ ತಿಳಿಕಂದು ಹಕ್ಕಿ, ಗಂಡು ಹಕ್ಕಿಯ ನೆತ್ತಿಯ ಮೇಲೆ ಬೂದು ಬಣ್ಣವಿದ್ದು, ಕೆನ್ನೆ, ಮೈಬಣ್ಣ ಬೂದು ಮಿಶ್ರಿತ ಕಂದು ಬಣ್ಣವಿರುತ್ತದೆ, ಪಕ್ಕೆಗಳು, ಹೊಟ್ಟೆಯ ಕೆಳಗೆ ಬಿಳಿಯಾಗಿರುತ್ತದೆ. ಎದೆ, ಕಣ್ಣಿನ ಸುತ್ತ ಕಪ್ಪು, ಹೆಣ್ಣು ಹಕ್ಕಿಯ ಕೆನ್ನೆ, ಕತ್ತು, ತಳಭಾಗ ಬಿಳಿಬಣ್ಣವಿರುತ್ತದೆ. ಇವು ಹಳೆಯ ಹೆಂಚಿನ ಮನೆಯ ಸೂರಿಗೆ ಹಾಕಿದ ಬಿದಿರಿನ ತೂತುಗಳಲ್ಲಿ ಮತ್ತು ಗೋಡೆಗಳ ಸಂದುಗಳಲ್ಲಿ ಒಣಗಿದ ಹುಲ್ಲು, ಹತ್ತಿ, ನಾರು ಮತ್ತು ಇತರ ಮೃದುವಾದ ವಸ್ತುಗಳಿಂದ ಕೂಡಿದ ನೂರಾರು ಗೂಡುಗಳನ್ನು ಮಾಡಿಕೊಂಡಿದ್ದವು. ಹೀಗೇ ಅದೆಷ್ಟೋ ಮರಿಗಳಿಗೆ ಜನ್ಮ ಕೊಟ್ಟು, ಸಾಕಿ-ಸಲಹಿ ದೊಡ್ಡದಾಗಿ ಮಾಡಿ ಸ್ವತಂತ್ರ ವಾಗಿ ಹಾರಡಲು ಕಾರಣವಾಗಿವೆ.

ಆದರೆ ಇಂದು ಗುಬ್ಬಿಗಳಿಗೆ ಎಲ್ಲಿಲ್ಲದ ತೊಂದರೆಗಳು ಬಂದೊದಗಿವೆ. ಅದಕ್ಕೆ ಕಾರಣ ಜನಸಂಖ್ಯೆಯ ಹೆಚ್ಚಳದಿಂದ ನಗರೀಕರಣಗೊಂಡು ಮನೆಗಳ ವಿನ್ಯಾಸ, ಇಂದಿನ ಆಧುನಿಕ ಜಗತ್ತಿನಲ್ಲಿ ಹೆಂಚು, ಗುಡಿಸಲು ಸೂರುಗಳು ಇಲ್ಲದೆ, ಬೆಂಗಳೂರಿನ ಎಲ್ಲಾ ಕಟ್ಟಡಗಳು ಗಾಜಿನ ಶೋಕಿಗಳಿಗೆ ಮಾರುಹೋಗಿವೆ. ಗುಬ್ಬಿಗಳು ಗೂಡುಗಳನ್ನು ಕಟ್ಟಲು ಸೂರಿಲ್ಲದೆ ತನ್ನ ಆವಾಸವನ್ನು ಕಳೆದುಕೊಳ್ಳುತ್ತಿವೆ. ಇಪ್ಪತ್ತು ವರ್ಷಗಳ ಹಿಂದೆ ಇದ್ದ ಗುಬ್ಬಿಗಳು ಇಂದು ಬೆಂಗಳೂರಿನಂತ ನಗರದಲ್ಲಿ ಮಾಯಾವಾಗಿವೆ, ಬೆಂಗಳೂರಿನಂತಹ ನಗರದಿಂದ ದೂರವಿರುವ ಗ್ರಾಮಾಂತರ ಪ್ರದೇಶಗಳಾದ ರಾಮನಗರ, ದೇವನಹಳ್ಳಿ, ಹೊಸಕೋಟೆ, ಚಿಕ್ಕಬಳ್ಳಾಪುರ, ಮಾಗಡಿ, ಕನಕಪುರ ಮತ್ತು ಆನೇಕಲ್ ಪ್ರದೇಶಗಳ ಕಡೆ ಇಂದಿಗೂ ಗುಬ್ಬಿಗಳು ಇವೆ, ಅದರೆ ನಾವು ಅವುಗಳ ಆವಾಸವನ್ನು ಹಾಳು ಮಾಡದಂತೆ ಹಳೆ ಶೈಲಿಯ ಮನೆಗಳ ರಚನೆ ಮತ್ತು ಅವುಗಳಿಗೆ ಮನೆಯ ಒಳಗೆ ಹೊರಗೆ ಗೂಡು ಮಾಡಲೂ ಅವಕಾಶ ನೀಡಬೇಕು, ಮತ್ತು ಬಿದಿರು ಇತರ ಮರಗಳ ವಸ್ತುಗಳಿಂದ ಮಾಡಿದ ಗೂಡುಗಳನ್ನು ಇಡುವುದರಿಂದ ಗುಬ್ಬಿಗಳ ಸಂತತಿಯನ್ನು ಉಳಿಸಬಹುದು. ಆಗಲಾದರೂ ಸ್ವಲ್ಪ ಮಟ್ಟಿಗೆ ಗುಬ್ಬಿಗಳ ಸಂತತಿಯನ್ನು ಉಳಿಸುವ ಪ್ರಯತ್ನ ಸಫಲವಾಗಬಹುದು.



ಗುಬ್ಬಿಗಳ ಆವಾಸಗಳನ್ನು ಹಾಳುಮಾಡಬೇಡಿ. . .!
ಪ್ರತೀ ಮನೆಯಲ್ಲೂ ಗುಬ್ಬಿ ಗೂಡಿಗೆ ಅವಕಾಶಮಾಡಿಕೊಡಿ. . .!
ಮಕ್ಕಳಿಗೆ ಗುಬ್ಬಿಗಳನ್ನು ತೋರಿಸಿ ಊಟ ಮಾಡಿಸಿ ನೋಡಿ. . .!
ಗುಬ್ಬಿಗಳ ಸಂರಕ್ಷಣೆಗೆ ನೀವು ಕೈಜೊಡಿಸಿ. . .!



# ವಿದ್ಯಾರ್ಥಿಗಾಗಿ ವಿಜ್ಞಾನ

## ❖ ತಿಮಿಂಗಿಲ ಮಾತನಾಡಿತೆ!!



“ಯಾರದು ನನ್ನನ್ನು ಹೊರಹೋಗು ಎಂದದ್ದು” ಸಮುದ್ರದಾಳದಲ್ಲಿ ವಿಜ್ಞಾನಿಯೊಬ್ಬ ಪ್ರಶ್ನಿಸಿದ!.

NOC ಎಂಬ ತಿಮಿಂಗಿಲದ ಪೋಷಕನಿಗೆ ಇದು ನಾವು ಮಾತನಾಡುವುದನ್ನು ಕೇಳಿಸುಕೊಂಡು ಪುನರುಚ್ಚರಿಸುತ್ತಿದೆಯೋ ಎಂಬ ಅನುಮಾನ. ಪ್ರಾಣಿಪ್ರಪಂಚದಲ್ಲಿ ಅನೇಕ ಹಕ್ಕಿಗಳು, ಸಮುದ್ರದ ಸಸ್ತನಿಗಳು ಮತ್ತು ಮನುಷ್ಯರು ಇತರೆ ಜೀವಿಗಳ ಶಬ್ಧಗಳನ್ನು ಅನುಕರಿಸುವ ಕಲೆ ಹೊಂದಿವೆ. 1940ರಲ್ಲೇ ವಿಜ್ಞಾನಿಗಳು ಬೇಲೂಗ ತಿಮಿಂಗಿಲಗಳು ಮಕ್ಕಳಂತೆ ಅಳುವ  ಸಂಜ್ಞೆಗಳನ್ನು ಮಾಡುತ್ತಿದ್ದದ್ದನ್ನು ಗಮನಿಸಿದ್ದರು. 1970ರಲ್ಲಿ NOC ಅನ್ನು ಸೆರೆ ಹಿಡಿಯಲಾಗಿದ್ದು, ಅಂದಿನಿಂದ ಅದು ತನ್ನ ಮಾತನ್ನು ಇತರೆ ತಿಮಿಂಗಿಲಗಳಿಗೆ ಹೋಲಿಸಿದರೆ ಮನುಷ್ಯರ ಕಂಪಾನಾಂಕಕ್ಕೆ ಹೊಂದಿಸಿಕೊಂಡಿದೆ. ಅದು ತನ್ನ ನಾಸಿಕದ ನಾಳಗಳಲ್ಲಿ ಗಾಳಿಯ ಒತ್ತಡವನ್ನು ಹೆಚ್ಚಿಸಿ ನಂತರ ಮೂಗಿನ ಹೊಳ್ಳೆಗಳ ಹಿಂಬದಿಯಲ್ಲಿರುವ ಸಣ್ಣ ತುಟಿಗಳ ಆಕಾರವನ್ನು ಕೂಡ ಬದಲಿಸುತ್ತದೆ ಎಂದು ಕಂಡುಹಿಡಿದಿದ್ದಾರೆ.

ನಮ್ಮ ತಿಮಿಂಗಿಲವು ಗಿಳಿಗಳ ತರಹ ಅನುಕರಿಸದಿದ್ದರೂ ಹೊಸದೊಂದು ಕಲಿತು ಮಾರ್ಪಾಡು ಮಾಡಿಕೊಂಡಿರುವುದೇ ಕುತೂಹಲಕಾರಿ ಸಂಗತಿ ಎನ್ನುತ್ತಾರೆ. *ಆಂಡಿ ಫುಟಿ (ಮರೀನ್ ಬಾಯಾಲಾಜಿಸ್ಟ್)* ಎಂಬುವಳು, ಹೌದು ಇದು ಮಾತನಾಡುತ್ತದೆ ಎಂದು ಒಪ್ಪಿದ್ದಾಳೆ, ಇದರ ಮಾತನ್ನು ರೆಕಾರ್ಡ್ ಮಾಡಿದ್ದಾಳೆ. ಅದನ್ನು ವೆಬ್ ನಲ್ಲಿ ಕೇಳಬಹುದು. ಯಾರು ಕುತೂಹಲ ತಡೆಯದೆ ನಿಜವಾಗಲೂ ನೋಡಬಯುಸುವರೋ ಅವರಿಗೆ  ನಿರಾಸೆ ಕಾದಿದೆ. NOC ಸತ್ತು ಹಲವು ವರ್ಷ ಕಳೆದಿವೆ.

# ದೂರದ ಚುಕ್ಕಿ

ಮೂಡಿದವೋ ದೂರದಲಿ
ಅಂಬರದ ಚುಕ್ಕಿ
ಬೆಳಕಿನ ಮರೆಯನು
ಮೀರುತಲಿ.

ತೆಳ್ಳಗೆ ಮಿನುಗುತ
ಕೆಂಪನು  ಅಳಿಸುತ
ಚಿಲಿಪಿಲಿಯ ಸಿಹಿದನಿಯ
ಮರೆಸುತಲಿ.

ಹಸಿರಿನಾ ಕಾನನವ
ಕೆಂಪಾಗಿ ಮೂಡುತಲಿ
ತಿಳಿಬಿಳಿಪು ನೀಡುತಾ
ಆ ಗಗನದಲಿ.

ತಾಯಿಯ ಮಿಡಿತಕೆ
ಕಂದನಾ ಕೂಗಿಗೆ
ಚರಪಕನೆ ಚಿಂತನೆಯ
ನೀಡುತಲಿ.

ಬಂದೆವೋ ಬಂದೆವೋ
ಮಿನಿಗುತಲಿ ಕಂಡವೋ
ಕಿರಿಹಿರಿಯರೇಲ
ಸಿಹಿ ಮನದಲಿ
ಚಿಲಿಪಿಲಿ  ನಾದದಲಿ.

ಜೀವನದ ನಲಿಸಲು
ದಣಿವಿಗೆ ಮನವನು
ತಣಿಸುತಲಿ.

ನಿಲುಕದಾ ನೆಲೆಯಲಿ
ತಿಳಿಯದ ಅನಂತದಲಿ
ಸಕಲರಿಗೂ ಚಿಂತನೆಯ
ಮೂಡಿಸುತಲಿ.

- ನಾಗರಾಜ್ ಆರ್ ಅಂಬಿಗ



Aparna, Amar, Vivek, Pallavi @ Varanasi